**ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 977/2019**

**ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-1**

ದಿ: **08.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ನಾಗರಾಜು |
| **ತಂದೆ/ಗಂಡನ ಹೆಸರು** | ಸಿದ್ದಯ್ಯ |
| **ವಯಸ್ಸು** | 60 ವರ್ಷ |
| **ಕೆಲಸ** | ಕೂಲಿ ಕೆಲಸ |
| ವಾಸಸ್ಥಳ | ಕಾಡನಕೊಪ್ಪಲು |

**(ಆರೋಪಿ ಗೈರುಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).**

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಆರೋಪಿ ಗೊತ್ತು. ಆತನನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ2 ನನ್ನ ಹೆಂಡತಿ, ಚಾಸಾ3 ನನ್ನ ಮಗಳು. ಘಟನೆ ನಡೆದಾಗ ಅವಳಿಗೆ ಸುಮಾರು 10 ವರ್ಷ ವಯಸ್ಸಾಗಿತ್ತು. ಚಾಸಾ4 ಮತ್ತು 5 ಗೊತ್ತು. ಸುಮಾರು 6 ವರ್ಷದ ಹಿಂದೆ ಸಂಜೆ 6 ಗಂಟೆಗೆ ನಮ್ಮ ಮನೆಗಸಂಬಂಧಿಕರು ಬಂದ ಕಾರಣ ಚಾಸಾ3 ರವರನ್ನು ಬೆಲ್ಲ ಮತ್ತು ಟೀ ಸೊಪ್ಪನ್ನು ತರಲು ಕಳುಹಿಸಿದೆ. ಆಗ ಹೋಗುವ ದಾರಿಯಲ್ಲಿ ಆರೋಪಿ ಚಾಸಾ3 ರವರಿಗೆ ಸಿಗರೇಟ್ ತೆಗೆದುಕೊಂಡು ಬಾ ಎಂದು ಹೇಳಿದ. ಆಗ ಚಾಸಾ3 ರವರು ಸಿಗರೇಟ್ ತೆಗೆದುಕೊಂಡು ಬರುವುದಿಲ್ಲ ಎಂದು ಹೇಳಿದ್ದಕ್ಕೆ ಆರೋಪಿ ಗಾಜಿನ ಬಾಟಲಿನಿಂದ ಶಿಶುವಿಹಾರದ ಗೋಡೆಗೆ ಹೊಡೆದನು. ಆಗ ಆ ಗಾಜಿನ ಚೂರು ನನ್ನ ಮಗಳ ಬಲಕಣ್ಣಿಗೆ ಬಿದ್ದಿರುತ್ತದೆ. ನಂತರ ನಾನು, ಚಾಸಾ2 ರವರು ಚಾಸಾ3 ರವರನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಯಾರೂ ಇರಲಿಲ್ಲ ನಂತರ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾವು ಆಸ್ಪತ್ರೆಯಲ್ಲಿದ್ದ ಕಾರಣ 2 ದಿನಗಳ ನಂತರ ತಡವಾಗಿ ದೂರನ್ನು ನೀಡಿರುತ್ತೇವೆ. ಸಾಕ್ಷಿಗೆ ದೂರನ್ನು ತೋರಿಸಿದ್ದು ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ1 ಮತ್ತು ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ದೂರನ್ನು ನೀಡಿ ಒಂದು ಗಂಟೆಯಾದ ನಂತರ ಪೊಲೀಸರು ಘಟನೆ ನಡೆದ ಸ್ಥಳಕ್ಕೆ ಬಂದು ಮಹಜರ್ ಅನ್ನು ಜರುಗಿಸಿದರು. ಮಹಜರ್ ನ್ನು ಮಾಡಿದಾಗ ಸಮಯ ಮಧ್ಯಾಹ್ನ 1 ರಿಂದ 2 ಗಂಟೆಯಾಗಿತ್ತು. ಆಗ ನನ್ನೊಂದಿಗೆ ಚಾಸಾ4 ಮತ್ತು 5 ರವರು ಇದ್ದರು. ಸ್ಥಳದಿಂದ ಗಾಜಿನ ಚೂರುಗಳನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ2

ಮತ್ತು ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಗಾಜಿನ ಬಾಟಲಿ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ**

ಆರೋಪಿಗೆ ಗಾಜಿನ ಬಾಟಲ್ ಅಪಾಯಕಾರಿ ವಸ್ತು ಇದನ್ನು ಜನರು ತಿರುಗಾಡುವ ಕಡೆ ಹೊಡೆದರೆ ಗಾಜಿನ ಚೂರುಗಳು ಜನರಿಗೆ ತಗುಲಿ ಪೆಟ್ಟಾಗುತ್ತದೆ ಎಂದು ತಿಳಿದಿದ್ದರೂ ಸಹ ಆತನು ಗಾಜಿನ ಬಾಟಲಿಯನ್ನು ಹೊಡೆದಿರುತ್ತಾರೆ ಎಂದರೆ ಸರಿ.

**ಪಾಟೀಸವಾಲು ಆರೋಪಿತರ ಪರ ಶ್ರೀ  ಎಸ್ ಎನ್ ಕೆ  ವಕೀಲರಿಂದಃ**

ನಾನು ಓದಿರುವುದಿಲ್ಲ ಕೇವಲ ಸಹಿ ಹಾಕಲು ಬರುತ್ತದೆ. ನಾನು ಠಾಣೆಯಲ್ಲಿ ದೂರನ್ನು ಬರೆಯಲು ಎಂದು ಇರುವವರಿಗೆ ಹೇಳಿ ನಿಪಿ1 ನ್ನು ಬರೆಸಿರುತ್ತೇನೆ. ನಮ್ಮ ಮನೆಯಿಂದ ನೋಡಿದರೆ ನನ್ನ ಮಗಳು ಅಂಗಡಿಗೆ ಹೋಗುವುದು ಕಾಣುತ್ತದೆ, ಆದರೆ ಅಲ್ಲಿ ಒಂದು ತಿರುವಿದೆ. ತಿರುವಿನಿಂದ ಮುಂದೆ ಅಂಗಡಿ ಬರುತ್ತದೆ. ಆರೋಪಿ ಮನೆಯಿಂದ ನಮ್ಮ ಮನೆ ಸುಮಾರು ದೂರವಾಗುತ್ತದೆ. ಅಂಗಡಿಯಿಂದ ಆರೋಪಿಯ ಮನೆ ಸುಮಾರು 100 ಮೀ ಆಗುತ್ತದೆ. ನಮ್ಮ ಮನೆಯಿಂದು ಶಿಶುವಿಹಾರಕ್ಕೆ 100 ಮೀ ಅಂತರದಲ್ಲಿದೆ. ಆರೋಪಿ ಮನೆಯಿಂದ ಶಿಶುವಿಹಾರ 20 ಮೀ ದೂರದಲ್ಲಿದೆ. ಶಿಶುವಿಹಾರ ಹಾಗೂ ರಸ್ತೆ ಅಕ್ಕಪಕ್ಕದಲ್ಲಿದೆ. ಚಾಸಾ3 ರವರು ಟೀ ಪುಡಿ ತರಲಿಲ್ಲ, ಅಷ್ಟೊತ್ತಿಗೆ ಏಟಾಗಿತ್ತು. ಚಾಸಾ3 ರವರು ಏಟಾದ ನಂತರ ಕೂಗಾಡಿದರು. ನಂತರ ನಾನು ಮನೆಯಿಂದ ಹೊರಗಡೆ ಬಂದು ನೋಡಿದೆ. ನಾನು ಕಣ್ಣಾರೆ ಆರೋಪಿ ಗಾಜಿನ ಬಾಟಲ್ ಅನ್ನು ಗೋಡೆಗೆ ಹೊಡೆದಿರುವುದನ್ನು ನೋಡಿರುವುದಿಲ್ಲ, ಚಾಸಾ3 ರವರು ನನಗೆ ಹೇಳಿರುತ್ತಾರೆ. ಶಿಶುವಿಹಾರದ ಅಕ್ಕಪಕ್ಕ ಅಂಗಡಿ ಇರುತ್ತದೆ. ಅಂಟಿಕೊಂಡು ಇರುವುದಿಲ್ಲ, ಆದರೆ ಇರುತ್ತದೆ. ಶಿಶುವಿಹಾರದ ಅಕ್ಕಪಕ್ಕ ರೇಷನ್ ಅಂಗಡಿ ಹಾಗೂ ಸೀಮೆಣ್ಣೆ ಮಾರಾಟ ಮಾಡುವ ಅಂಗಡಿ ಇರುವುದಿಲ್ಲ. ನಾನು ಮತ್ತು ನನ್ನ ಹೆಂಡತಿ ಅನ್ಯೋನ್ಯವಾಗಿ ಜೀವನ ಮಾಡುತ್ತಿದ್ದೇವೆ ಎಂದರೆ ಸರಿ. ಆರೋಪಿಗೂ ನಮಗೂ ಆಗಾಗ ಗಲಾಟೆಯಾಗುತ್ತಿತ್ತು ಎಂದರೆ ಸರಿಯಲ್ಲ. ಮೊದಲಿನಿಂದಲೂ ಆರೋಪಿಗೂ ನಮಗೂ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ

ಮಕ್ಕಳು ಮನೆಯಲ್ಲಿ ಆಗಾಗ ಗಲಾಟೆ ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಮನೆಯಲ್ಲಿ ಗಲಾಟೆ ಮಾಡಿಕೊಂಡು ಕೈಗೆ ಸಿಕ್ಕ ವಸ್ತುವನ್ನು ಹೊಡೆದು ಹಾಕುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಕ್ಕಳು ಕೈಯಲ್ಲಿದ್ದ ಮೊಬೈಲ್ ನ್ನು ಬಿಸಾಕಿ ಹೊಡೆದು ಹಾಕುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಬಾಟಲಿನಿಂದ ಹೊಡೆದರು ಎಂದು ಹೇಳಿದ್ದು ಅದು ಯಾವ ಬಾಟಲ್ ಹಾಗೂ ಎಷ್ಟು ಲೀಟರ್ ಎಂದು ನನಗೆ ಗೊತ್ತಿಲ್ಲ. ಮು ಮಾ 1 ಕ್ಕೆ ನನ್ನ ಸಹಿಯನ್ನು ಪಡೆದಿರುವುದಿಲ್ಲ. ಮು ಮಾ 1 ರ ಮೇಲೆ ಯಾರ ಸಹಿಯೂ ಇರುವುದಿಲ್ಲ. ಪೊಲೀಸರು ನನಗೆ ನಿಪಿ2 ನ್ನು ಜರುಗಿಸುವ ಮುನ್ನ ಯಾವುದೇ ನೋಟಿಸ್ಸನ್ನು ನೀಡಿರುವುದಿಲ್ಲ. ಚಾಸಾ4 ನನಗೆ ಸಂಬಂಧಿಕರಲ್ಲ. ಶಿಶುವಿಹಾರದಿಂದ ಯಾವ ದಿಕ್ಕಿನಲ್ಲಿ ರಸ್ತೆ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಮನೆಯಿಂದ ನಡೆದುಕೊಂಡು ಹೋಗುವಾಗ ಚಾಸಾ3 ರವರ ಎಡಕ್ಕೆ ಅಂಗನವಾಡಿ ಇತ್ತು. ಚಾಸಾ3 ರವರನ್ನು 15 ದಿನಗಳ ನಂತರ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ. ಘಟನೆ ನಡೆಯಿತು ಎಂದು ಹೇಳಲಾಗುವ ದಿನದಂದೇ ದೂರನ್ನು ನೀಡಬಹುದಿತ್ತು ಎಂದರೆ ಸಾಕ್ಷಿ ಚಾಸಾ3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಉತ್ತರಿಸುತ್ತಾರೆ. ನಾನು ಈ ಘಟನೆಯನ್ನು ಹಾಗೂ ದಾಖಲಾತಿಗಳನ್ನು ಸೃಷ್ಟಿಸಬೇಕಿತ್ತು ಆದ ಕಾರಣ ನಾನು ತಡವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಅವರವರ ನಡುವೆ ಗಲಾಟೆ ಮಾಡಿಕೊಂಡು ಮೊಬೈಲನ್ನು ಹೊಡೆದು ಹಾಕಿರುತ್ತಾರೆ ಆಗ ಮೊಬೈಲ್ ನ ಗಾಜಿನ ಚೂರು ಚಾಸಾ3 ರವರಿಗೆ ಬಿದ್ದು ಏಟಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನ ನಡುವೆ ಗಲಾಟೆ ನಡೆದಿರುತ್ತದೆ, ಆದ ಕಾರಣ ಈ ರೀತಿ ಸುಳ್ಳು ದೂರನ್ನು ನೀಡಿದರೆ ಆರೋಪಿಯಿಂದ ಪರಿಹಾರ ಪಡೆಯಬಹುದೆಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ನಿಪಿ2 ನ್ನು ಜರುಗಿಸಿರುವುದಿಲ್ಲ ಹಾಗೂ ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಹಾಗೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಕ್ಕಳ ಬೇಜವಾಬ್ದಾರಿಯಿಂದ ಚಾಸಾ3 ರವರಿಗೆ ಏಟಾಗಿರುತ್ತದೆ ಹಾಗೂ ಚಾಸಾ3 ರವರ ತಪ್ಪಿನಿಂದಲೇ ಆ ರೀತಿ ಆಗಿರುತ್ತದೆ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಘಟನೆ ನಡೆದಿರುವುದಿಲ್ಲ ಹಾಗೂ ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಿಪಿ1 ನ್ನು ಬರೆದಿರುತ್ತಾರೆ ನಾನು ಅದನ್ನು ತಿಳಿದುಕೊಳ್ಳದೇ ಸಹಿ ಹಾಕಿರುತ್ತೇನೆ ಎಂದರೆ

ಸಾಕ್ಷಿ ನನಗೆ ಓದಿ ಹೇಳಿ ವಿಚಾರವನ್ನು ತಿಳಿಸಿ ನಾನು ಹೇಳಿದ ಹಾಗೆ ಬರೆದು ನಂತರ ನಾನು ಸಹಿ ಹಾಕಿರುತ್ತೇನೆ. ಆರೋಪಿ ಅಂಗನವಾಡಿ ಗೋಡೆಗೆ ಗಾಜಿನ ಬಾಟಲನ್ನು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾಸಾ3 ರವರಿಗೆ ಸಿಗರೇಟ್ ತರಲು ಹೇಳಿರುವುದಿಲ್ಲ, ನಾನು ಈ ಪ್ರಕರಣಕ್ಕಾಗಿ ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಗಾಜಿನ ಬಾಟಲ್ ಹೊಡೆದಿರುವುದಿಲ್ಲ ಹಾಗೂ ಅದರ ಚೂರು ಚಾಸಾ3 ರವರ ಕಣ್ಣಿಗೆ ಬಿದ್ದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳ ನಿರ್ಲಕ್ಷತೆಯಿಂದ ಚಾಸಾ3 ರವರಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಮು ಮಾ 1 ನ್ನು ನನ್ನ ಮುಂದೆ ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಅಮಾನತ್ತುಪಡಿಸಿಕೊಂಡಿದ್ದರೆ ನನ್ನ ಸಹಿಯನ್ನು ಪಡೆಯುತ್ತಿದ್ದರು ಎಂದರೆ ಸಾಕ್ಷಿ ನನ್ನ ಮುಂದೆಯೇ ಅಮಾನತ್ತುಪಡಿಸಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಗಾಜಿನ ಬಾಟಲ್ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮನೆಯಲ್ಲಿದ್ದ ಸೀಮೆಣ್ಣೆ ಬಾಟಲ್ ಅನ್ನು ಪೊಲೀಸರಿಗೆ ಈ ಪ್ರಕರಣಕ್ಕಾಗಿ ನೀಡಿ ಸೃಷ್ಟಿಸಿರುತ್ತೀರಿ ಎಂದರೆ ಸರಿಯಲ್ಲ. ಮು ಮಾ 1 ನ್ನು ಸಾಕ್ಷಿ ನೀಡಿ ಅದರಲ್ಲಿ ಸೀಮೆಣ್ಣೆ ವಾಸನೆ ಬರುತ್ತಿದೆ ಮೂಸಿ ನೋಡಲು ಹೇಳಿದಾಗ ಸಾಕ್ಷಿ ಮು ಮಾ 1 ರಿಂದ ಯಾವುದೇ ವಾಸನೆ ಬರುತ್ತಿಲ್ಲ ಎಂದು ಹೇಳುತ್ತಾರೆ. ಚಾಸಾ4 ರವರು ನನ್ನ ಸಂಬಂಧಿಕರು ಆದರೆ ನಾನು ಈ ದಿನ ಅವರು ನನ್ನ ಸಂಬಂಧಿಕರಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗನವಾಡಿ ಕಡೆ ಯಾವುದೇ ಬೀದಿ ದೀಪ ಇರುವುದಿಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.